ಶ್ರೀ ಬಿ. ಎಂ. ಪಾಟೀಲ್:—ಮಾನ್ಯ ಸದಸ್ಯರು ಡಿಲೇ ಆಯಿತು ಎಂದು ಹೇಳುತ್ತಾರೆ. ಅದು ಸರಿಯಾದ್ದಲ್ಲ ಎಂದು ಹೇಳುತ್ತೇನೆ. ರಿಪೋರ್ಟ್ ಬಂದದ್ದು ೧೯೬೮ರಲ್ಲಿ ೧೯೬೯ನೇ ಇಸವಿ ಒನೇ ತಿಂಗಳಿನಲ್ಲಿ ಕ್ರಮ ತೆಗೆದುಕೊಳ್ಳಲಿಕ್ಕೆ ಬರೆದಿದ್ದೇವೆ. ಡಿವಿಜನಲ್ ಕಮಿಷನರು ನೋಟೀಸ್ ಕೊಟ್ಟು ಸರ್ಚಾರ್ಜ್ ಪ್ರೊಸೀಡಿಂಗ್ಸ್ ಇನ್‌ಸ್ಟಿಟ್ಯೂಟ್ ಮಾಡಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ಆ ರೀತಿ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರಿ ಕೆ. ಎಚ್. ರಂಗನಾಥ್:—ಸ್ಪೆಷಲ್ ಆಡಿಟ್ ರಿಪೋರ್ಟ್‌ನಲ್ಲಿ ಏನು ಹೇಳಿದ್ದಾರೆ? ಯಾವುದೇ ಹಣ ತೋರಿಸಿಲ್ಲವೆ? ಸುಮ್ಮನೆ ಅನ್ಯಾಯವಾಗಿದೆ ಅಂತ ಮುಗುಂಆಗಿ ಆಡಿಟ್ ರಿಪೋರ್ಟ್‌ನಲ್ಲಿ ಬರೆದಿದ್ದಾರೆಯೇ ಹೇಗೆ?

ಶ್ರೀ ಬಿ. ಎಂ. ಪಾಟೀಲ್:—ಹೈಸ್ಕೂಲ್ ಒಂದು ಬಿಲ್ಡಿಂಗ್ ಕಟ್ಟಲು ಪ್ರಾರಂಭ ಮಾಡಿದ್ದರು. ಆದರಲ್ಲಿ ಸುಮಾರು ಒಂದು ಲಕ್ಷ ಚಿಲ್ಲರೆ ಹಣ ಕಂಟ್ರಾಕ್ಟರಿಗೆ ಹೆಚ್ಚಾಗಿ ಕೊಟ್ಟಿದ್ದಾರೆ ಅದನ್ನು ಆ ಕಂಟ್ರಾಕ್ಟರಿಂದ ಮತ್ತು ಯಾರು ಕೊಟ್ಟಿದ್ದಾರೋ ಮುನಿಸಿಪಲ್ ಪ್ರೆಸಿಡೆಂಟರಾಗಲಿ, ಸಂಬಂಧಪಟ್ಟ ಅಧಿಕಾರಿಗಳಾಗಲಿ ಅವರಿಂದ ವಸೂಲು ಮಾಡಲು ಕ್ರಮ ತೆಗೆದುಕೊಳ್ಳುವುದಕ್ಕೆ ಬರೆದಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ:— ಆಡಿಟ್ ರಿಪೋರ್ಟ್‌ನಲ್ಲಿ ಅಸೆಸ್ ಮಾಡಿರುವ ಮೊಬಲಗು ಎಷ್ಟು? ಸ್ಟೇಟ್ ಅಕೌಂಟ್ಸ್‌ನವರು ಸ್ಪೆಷಲ್ ಆಡಿಟ್ ಮಾಡಿ ರಿಪೋರ್ಟ್ ಕೊಟ್ಟಿರುವುದರಲ್ಲಿ ಅಸೆಸ್ ಮಾಡಿರುವ ಮೊಬಲಗು ಎಷ್ಟು? ಆ ಮುನಿಸಿಪಲ್ ಪ್ರೆಸಿಡೆಂಟರು ಕಾಂಗ್ರೆಸ್ ಅಧ್ಯಕ್ಷರು ಅಲ್ಲವೆ? ಅವರ ಮೇಲೆ ಕ್ರಮ ತೆಗೆದು ಕೊಳ್ಳಕೂಡದು ಅಂತ ಸರ್ಕಾರ ಮಾಡಿರುವುದು ನಿಜವೆ? ದಯವಿಟ್ಟು ಇದನ್ನು ಖಚಿತವಾಗಿ ತಿಳಿಸಬೇಕು.

ಶ್ರೀ ಬಿ. ಎಂ. ಪಾಟೀಲ್:—ಆಗಲೇ ಹೇಳಿದ್ದೇನೆ. ಈಗ ಎಷ್ಟು ಲಕ್ಷ ರೂಪಾಯಿ ಅಂತ ಹೇಳುವುದಕ್ಕಾಗುವುದಿಲ್ಲ. ಹೈಸ್ಕೂಲು ಕಟ್ಟಡದಲ್ಲಿ ಒಂದು ಲಕ್ಷ ಚಿಲ್ಲರೆ ರೂಪಾಯಿ ಹೆಚ್ಚಿಗೆ ಕೊಟ್ಟಿದ್ದಾರೆ. ಆದರ ಸಲುವಾಗಿ ಸರ್ಚಾರ್ಜ್ ಪ್ರೊಸೀಡಿಂಗ್ಸ್ ಇನ್‌ಸ್ಟಿಟ್ಯೂಟ್ ಮಾಡಲು ಪ್ರಾರಂಭ ಮಾಡಿದ್ದಾರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾ ಇದ್ದಾರೆ ಎಂದು ಈಗಾಗಲೇ ಹೇಳಿದ್ದೇನೆ.

VILLAGE SHANBHOGUES IN COONDAPUR TALUK

470 SMT. WINNIFRED F. FERNANDES (Coondapur).—Will the Minister for Revenue be pleased to state :—

(*a*) the total number of Village Shanbhogues working in Coondapur taluk at the time the Government decided to abolish those posts and decided to appoint Village Accountants instead;

(*b*) the number of posts of Village Accountants created for Coondapur Taluk;

(*c*) the number of old Village Shanbhogues absorbed as Village Accountants and the number among them relieved of their jobs so far, in Coondapur Taluk;

(*d*) the criteria on which these Shanbhogues were selected or rejected for the post of Village Accountants?

SRI H.V. KOUJALGI (Minister for Revenue).—

(a) 56.

(b) 72.

(c) (i) 22.

(ii) 2.

(d) The recruitment was under the provisions of Sub-Rule (1) of Rule 10 of the Mysore General Services (Revenue Sub-ordinate Branch) Village Accountants (Cadre and Recruitment) Rules, 1961, extract below.

Extract of Rule 10 of the Mysore General Services (Revenue Subordinate Branch) Village Accountants (Cadre and Recruitment) Rules, 1961.

10 Initial recruitment to Village Accountants:—Notwithstanding anything contained in these Rules recruitment for the first time in respect of the posts of Village Accountants shall be made—

(i) from amongst persons holdings the posts of Village Officers on the date of commencement of these Rules and whose age does not exceed 40 years on the said date and who possess the minimum qualification prescribed in Rule 7 and who are not disqualified under Rule 8 and who are selected under Rule 11;

(Provided that in the event of persons satisfying the said qualifications not becoming available even after advertising the vacancies twice, recruitment shall be made for among persons holding the posts of village Officers who are not more than 50 years of age on the date of commencement of these rules and who have passed Lower Secondary or Vernacular Final or equivalent Examination).

SMT. WINNIFRED F. FERNANDES :—Out of 56 Shanbhogues in Coondapur Taluk, 22 were absorbed as Village Accountants and 2 were relieved. What has happened to the remaining 32 Shanbhogues?

SRI H.V. KOUJALGI :—They were also relieved.

SMT WINNIFRED F. FERNANDES :—May I know the reason for not absorbing them as Village Accountants?

SRI H.V. KOUJALGI :—As per rules they were not qualified.

SMT. WINNIFRED F. FERNANDES :—As far as I know these Shanbhogues are eligible for absorption according to the recruitment rules and they are below 50 years of age. Why they were relieved?

SRI H.V. KOUJALGI :—If they are below 50 and if they have passed the vernacular final or equivalent examination they are eligible for absorption. If they do not possess these qualifications they cannot be absorbed.

SMT. WINNIFRED F. FERNANDES :—Since I know they are fully qualified, will the Government reconsider their cases and take them to duty?

SRI H.V. KOUJALGI :—So far as the old Shanbhogues are concerned we cannot make any relaxation of rules.

ಶ್ರೀ ಬಿ. ದೊಡ್ಡಬೋರೇಗೌಡ :—ಗ್ರಾಮ ಶ್ಯಾನುಭೋಗರ ಅನುವಂಶಿಕ ಹುದ್ದೆ ಈಗ ರದ್ದು ಮಾಡಿದೆ. ಅವರಿಂದ ಜನರಿಗೆ ತೊಂದರೆ ಮತ್ತು ಸರಕಾರಕ್ಕೂ ತೊಂದರೆ ಇರುವುದರಿಂದ ಅವರನ್ನು ಜಾಗ್ರತೆ ಮನೆಗೆ ಕಳಿಸುತ್ತೀರಾ ?

SRI H.V. KOUJALGI :—So far as the old Shanbhogues are concerned, some concession is already given. We have to absorb about 4000 people as per new Rules, and the new Rules are published in the Gazette this month. As Soon as the rules are finalised they will be absorbed.

ಶ್ರೀ ಜಿ.ಎನ್. ಪಾಟೀಲ್ :—ಎಸ್.ಎಸ್.ಎಲ್.ಸಿ. ಆದವರನ್ನು ನೇಮಕಮಾಡಿಕೊಳ್ಳುತ್ತೀರಿ. ಈಗಾಗಲೇ ಹತ್ತು ಹನ್ನೆರಡು ವರ್ಷ ಸರ್ವಿಸ್ ಮಾಡಿರುವವರಿದ್ದಾರೆ ಅವರನ್ನು ನೇಮಕಮಾಡಿಕೊಳ್ಳಲು ಸಾಧ್ಯವಿದೆಯೇ?

SRI H.V. KOUJALGI :—If they are below 50 and are qualified they will be absorbed.

SRI K.H. RANGANATH :—Out of the 32 old Shanbhogues relieved in Coondapur Taluk, may I know how many were overaged and how many were qualified and how many did not have the minimum qualification?

SRI H.V. KOUJALGI :—I do not have the exact figures, but those who were relieved were not qualified.

SRI K.H. RANGANATH :—In view of the Hon. Member's assertion that all these people are fully qualified, will the Government try to verify it once again?

SRI H.V. KOUJALGI :—If the Hon. Member brings to the notice of the Government any specific instance, I will examine it. It is no use examing the whole list.

ಶ್ರೀ ಕೆ.ಫಂ. ತಪ್ಪಯ್ಯ : ರೆವೆನ್ಯೂ ಕಂದಾಯ ಮತ್ತು ಗ್ರಾಮಪಂಚಾಯಿತಿ ಕಂದಾಯ ವಸೂಲು ಮಾಡಲು ಒಬ್ಬರೇ ಇರುವುದರಿಂದ ಕೆಲಸ ಜಾಸ್ತಿಯಾಗಿದೆ. ಆದುದರಿಂದ ರೆವೆನ್ಯೂ ಕಂದಾಯ ವಸೂಲುಮಾಡುವುದಕ್ಕೆ ಬೇರೆಯವರನ್ನು ನೇಮಿಸುವಿರಾ?

SRI H.V. KOUJALGI :—According to the proposed rules, for each Panchayat there will be one Village Accountant. If the Government finds that work is more for one person, there is provision to appoint more than one.

ಶ್ರೀ ಎಂ ಕೆ. ಬೊಮ್ಮೇಗೌಡ :—ಕುಂದಾಪುರ ತಾಲ್ಲೂಕಿನಲ್ಲಿ ಮೊದಲು ೫೬ ಶಾನುಭೋಗರಿದ್ದರು, ಈಗ ೭೨ ಗ್ರಾಮ ಲೆಕ್ಕಿಗರ ಹುದ್ದೆಗಳಿವೆ. ಲೆಕ್ಕಿಗರ ಹುದ್ದೆ ಜಾಸ್ತಿಯಾಗಿರುವುದರಿಂದ ಸಂಬಳಕ್ಕಾಗಿ ಜಾಸ್ತಿ ಖರ್ಚಾಗುವುದು. ಬರುವ ಆದಾಯವನ್ನೆಲ್ಲಾ ಅವರಿಗೇ ಕೊಟ್ಟರೆ ರೆವೆನ್ಯೂ ಗತಿಯೇನಾಗಬೇಕು?

SRI H.V. KOUJALGI :—Old Shanbhogues are continued on the old terms, and those terms are yet to be finalised.

ಶ್ರೀ ಸಿದ್ದಯ್ಯ ಕಾಶೀಮಠ :—ಕೆಲಪು ಕಡೆ ಪರಿಪೂರ್ಣ ಅಕೌಂಟೆಂಟ್ ಇಲ್ಲದೆ ಇರುವವರ ಮೇಲೆ ಅಲಿಗೇಷನ್ ಇರುವ ಕಡೆ ಯಾರಿದುವರೋ ಅವರನ್ನು ಕಂಪಲ್ಸರಿಯಾಗಿ ರಿಟೈರ್‌ಮಾಡಿ ಅವರಿಗೆ ಪೆನ್‌ಷನ್ ಕೊಡುವಿರಾ?

SRI H.V. KOUJALGI :—Compulsory retirement rule applies to every body if the work is not satisfactory.

ಶ್ರೀ ಪ್ರಹ್ಲಾದಪ್ಪ ಬಿ. ಬಣಕಾರ್ :—ರೂಲ್ಸಿನ ಪ್ರಕಾರ ಅವರನ್ನು ನೇಮಕ ಮಾಡಿದ್ದಾರೆ, ಅವರ ಪೇ ಸ್ಕೇಲ್ ವಿಚಾರ ಮುಂತಾದ್ದನ್ನು ರೂಲ್ಸ್ ಪ್ರಕಾರ ರೆಗ್ಯುಲರೈಜ್ ಮಾಡಿಲ್ಲ. ಆದುದರಿಂದ ಅವರನ್ನು ವರ್ಗ ಮಾಡಿದರೆ ತೊಂದರೆಯಾಗುವುದರಿಂದ ರೂಲ್ಸ್ ಮಾಡುವವರೆಗೆ ವರ್ಗಾವಣೆ ಬಗ್ಗೆ ಕ್ರಮ ಕೈಕೊಳ್ಳದಂತೆ ನೋಡಿಕೊಳ್ಳುವಿರಾ?

ಉಪಾಧ್ಯಕ್ಷರು :—ಆ ಪ್ರಶ್ನೆ ಉದ್ಭವಿಸುವುದಿಲ್ಲ, ಇದು ಕುಂದಾಪುರಕ್ಕೆ ಸಂಬಂಧಪಟ್ಟದ್ದು.

INDUSTRIAL DISIRICT CO-OPERATIVE CREDIT BANK IN BELGAUM CITY

477. Sri B. B. SAYANAK (Belgaum).—

Will the Minister for Development be pleased to state :—

(*a*) whether there is an Industrial District Co-operative Credit Bank in Belgaum city ;

(*b*) if so, the share capital of the Society ;

(*c*) the number of Directors that have taken loans from the Bank and the amount of loan taken by each Director ;

(*d*) the number of share holders of the Bank ;

(*e*) the name of the Chairman of the said Bank ?